**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ:ಸಿಬ್ಬಂದಿ-3/3ಸಿ/ಸಿಆರ್-12/2015-16

ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ,
ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1,
ಗಾಂಧಿನಗರ, ಬೆಂಗಳೂರು-09,
ದಿನಾಂಕ: 29-01-2019.

**ಅಧಿಕೃತ ಜ್ಞಾಪನ**

ವಿಷಯ: ಕರ್ನಾಟಕ ಲೋಕಸೇವಾ ಆಯೋಗದಿಂದ ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಬಗ್ಗೆ.

ಉಲ್ಲೇಖ: 1) ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ಸಂಖ್ಯೆ: ಇ(3)133/2015-16/ಪಿಎಸ್‌ಸಿ, ದಿನಾಂಕ: 30-06-2015.
2) ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ: ಇ(3)182/2018-19/ಪಿಎಸ್‌ಸಿ, ದಿನಾಂಕ: 03-09-2018.
3) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಇ(3)184/2018-19/ಪಿಎಸ್‌ಸಿ, ದಿನಾಂಕ: 06-09-2018.

** ** **

ಕರ್ನಾಟಕ ಲೋಕಸೇವಾ ಆಯೋಗವು ಉಲ್ಲೇಖದ ಅಧಿಸೂಚನೆಯ ಅನ್ವಯ ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾದ ನಾಲ್ಕು ಅಭ್ಯರ್ಥಿಗಳ ಪಟ್ಟಿಯನ್ನು ರವಾನಿಸಿರುತ್ತದೆ. ಈ ನಾಲ್ಕು ಅಭ್ಯರ್ಥಿಗಳ ಪೈಕಿ ಮೂರು ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನೆಗೆ ಹಾಜರಾಗಿರುತ್ತಾರೆ. ಈ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲಿಸಲಾಗಿದೆ. ವಿವಿಧ ಮೀಸಲಾತಿ ಕೋಟಾದಡಿ ಆಯ್ಕೆಯಾದ ಈ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರಗಳ ದೃಢೀಕರಣ ಹಾಗೂ ಪೊಲೀಸ್ ತನಿಖಾ ವರದಿಗಳನ್ನು ಪಡೆಯಲಾಗಿದೆ. ಈ ಧೃಢೀಕರಣ ಪತ್ರಗಳು ಮತ್ತು ಪರಿಶೀಲನಾ ವರದಿಗಳು ಕ್ರಮಬದ್ಧವಾಗಿರುವುದರಿಂದ, ಈ ಕೆಳಕಂಡ ಮೂರು ಅಭ್ಯರ್ಥಿಗಳನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವೇತನ ಶ್ರೇಣಿ ರೂ.21400-500-22400-550-24600-600-27000-650-29600-750-32600-850-36000-950-39800-1100-42000 ರಲ್ಲಿ ಪರೀಕ್ಷಾರ್ಥಿಗಳನ್ನಾಗಿ ನೇಮಕ ಮಾಡಿ ಅವರ ಹೆಸರಿನ ಮುಂದೆ ಅಂಕಣ-6ರಲ್ಲಿ ಕಾಣಿಸಿರುವ ಕಛೇರಿ/ವಿಭಾಗಗಳಿಗೆ ಹಂಚಿಕೆ ಮಾಡಿ ಆದೇಶಿಸಲಾಗಿದೆ:-

| ಉಳಿದ ಮೂಲ ವೃಂದ | | | | | |
|---|---|---|---|---|---|
| ಕ್ರ. ಸಂ. | ಕೆಪಿಎಸ್‌ಸಿ ಕ್ರ.ಸಂ. | ಅಭ್ಯರ್ಥಿಯ ಹೆಸರು ಮತ್ತು ವಿಳಾಸ ಶ್ರೀಯುತ | ಮೀಸಲಾತಿ | ಜನ್ಮ ದಿನಾಂಕ | ನೇಮಕಾತಿ ಮಾಡಲಾದ ಕಛೇರಿ |
| 1 | 2 | 3 | 4 | 5 | 6 |
| 1 | 1 | ಭರತೇಶ ಎಸ್.<br>#31, ಸಿದ್ದಾಪುರ,<br>ಹೊನ್ನೇನಹಳ್ಳಿ ಅಂಚೆ,<br>ಬೆಳ್ಳೂರು ಹೋಬಳಿ,<br>ನಾಗಮಂಗಲ ತಾಲ್ಲೂಕು,<br>ಮಂಡ್ಯ ಜಿಲ್ಲೆ,<br>ಮಂಡ್ಯ-571418. | ಸಾ.ಅ./<br>3ಎ/<br>ಗ್ರಾ.ಅ. | 01-08-82 | ವಾಣಿಜ್ಯ ತೆರಿಗೆ ಅಧಿಕಾರಿ (ಲೆಕ್ಕ ಪರಿಶೋಧನೆ)-1, ತುಮಕೂರು.<br>(ಖಾಲಿ ಹುದ್ದೆಗೆ) |
| 2 | 2 | ಜಯರಾಮು ಎನ್.<br>ಕಂಬದಹಳ್ಳಿ ವಾಸ ಮತ್ತು ಅಂಚೆ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ,<br>ಮಂಡ್ಯ-571802. | ಸಾ.ಅ./<br>3ಎ | 01-04-85 | ವಾಣಿಜ್ಯ ತೆರಿಗೆ ಅಧಿಕಾರಿ (ಆಂಲೆಪ & ತ)-1, ಮೈಸೂರು. (ಖಾಲಿ ಹುದ್ದೆಗೆ) |
| 3 | 3 | ಮಂಜುನಾಥ ಕೆ.<br>ಬಾಲಾಜಿ ಮಿಲ್ ಹತ್ತಿರ,<br>ಕೊಟ್ಟೂರು ರಸ್ತೆ,<br>ಹಗರಿಬೊಮ್ಮನಹಳ್ಳಿ,<br>ಬಳ್ಳಾರಿ-583212. | 2ಎ | 12-02-86 | ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು, ಸ್ಥಳೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-505, ಹಗರಿಬೊಮ್ಮನಹಳ್ಳಿ.<br>(ಖಾಲಿ ಹುದ್ದೆಗೆ) |

**ಈ ನೇಮಕಾತಿಯು ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ:-**

1) ಈ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ.

2) ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯಾನುಸಾರ ನೀಡಲಾಗುತ್ತಿರುವ ನೇಮಕಾತಿ ಆದೇಶವು ಆಯ್ಕೆಪಟ್ಟಿ / ಅಭ್ಯರ್ಥಿಗಳ ಆಯ್ಕೆ / ಮೀಸಲಾತಿ ವರ್ಗ ಮತ್ತು ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ನೀಡಿರುವ / ನೀಡುವ ತೀರ್ಪುಗಳಿಗೆ ಒಳಪಟ್ಟಿರುತ್ತದೆ.

3) ಸದರಿ ಅಭ್ಯರ್ಥಿಗಳಿಗೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಆದೇಶದಂತೆ, ಕರ್ನಾಟಕ ಲೋಕಸೇವಾ ಆಯೋಗವು ನಿಗದಿಪಡಿಸಿರುವ / ನಿಗದಿಪಡಿಸುವ ಜೇಷ್ಠತೆಯಲ್ಲಿ ಸ್ಥಿರೀಕರಿಸಲಾಗುವುದು.

4) ನೇಮಕಾತಿ ಆದೇಶ ಸ್ವೀಕರಿಸಿದ 15 ದಿನಗಳ ಒಳಗಾಗಿ ಅಭ್ಯರ್ಥಿಗಳು ನಿಯುಕ್ತಿಗೊಳಿಸಲಾದ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ನಿಗದಿತ ದಿನಾಂಕದೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿದ್ದಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 18(3)ರನ್ವಯ ನೇಮಕಾತಿಯನ್ನು ರದ್ದುಪಡಿಸಲಾಗುವುದು.

5) ದ್ವಿತೀಯ ದರ್ಜೆ ಸಹಾಯಕರುಗಳು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಾರ್ಥ) ನಿಯಮಗಳು, 1977ರ ಅನ್ವಯ ಅವರು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ

ಕಾಲಾವಧಿಯಲ್ಲಿಯೇ ಪರೀಕ್ಷಾರ್ಥ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸುವುದು ಕಡ್ಡಾಯವಾಗಿರುತ್ತದೆ.

6) ಪರೀಕ್ಷಾರ್ಥ ಸೇವಾವಧಿಯಲ್ಲಿ ಕರ್ನಾಟಕ ನಾಗರೀಕ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು 1947ರಡಿ ನಿರ್ದಿಷ್ಟಪಡಿಸಿರುವ ಈ ಕೆಳಕಂಡ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಬೇಕಾಗಿದೆ:-

   1) ಅಕೌಂಟ್ಸ್ ಲೋಯರ್
   2) ವಾಣಿಜ್ಯ ತೆರಿಗೆ ಭಾಗ-2
   3) ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ

7) ಸರ್ಕಾರದ ಆದೇಶ ಸಂಖ್ಯೆ: ಆಇ (SPL) 04 PET 2005, ದಿನಾಂಕ: 31-03-2006ರ ಮೇರೆಗೆ ಈ ನೇಮಕಾತಿಯು ಪಿಂಚಣಿ ರಹಿತವಾಗಿದ್ದು, ಹೊಸದಾಗಿ ಅನುಷ್ಠಾನಗೊಳಿಸಲಾಗಿರುವ ಅಂಶದಾಯಿ ಪಿಂಚಣಿ ಯೋಜನೆಗೆ (Contributory Pension Scheme) ಒಳಪಟ್ಟಿರುತ್ತದೆ.

8) ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಭಾರತ ಸಂವಿಧಾನದ ರೀತ್ಯಾ ಕೆಳಕಂಡಂತೆ "ನಿಷ್ಠೆಯ ಪ್ರಮಾಣ ಪತ್ರ" ಸಲ್ಲಿಸತಕ್ಕದ್ದು:-

**ಅಭ್ಯರ್ಥಿಗಳು ಸೇವೆಗೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸುವ ಭಾರತ ಸಂವಿಧಾನದ ರೀತ್ಯಾ "ನಿಷ್ಠೆಯ ಪ್ರಮಾಣ ಪತ್ರ"**

ಅ) ನಾನು ______________________ ಸರ್ಕಾರಿ ಸೇವೆಯಲ್ಲಿ ಪ್ರಾಮಾಣಿಕತೆಯಿಂದಲೂ ಭಾರತ ಸಂವಿಧಾನಕ್ಕೆ ಬದ್ಧನಾಗಿ ನಿಷ್ಠೆಯಿಂದಲೂ ಕಾರ್ಯನಿರ್ವಹಿಸುತ್ತೇನೆ.

ಆ) ನನಗೆ ಮದುವೆಯಾಗಿದೆ/ ಮದುವೆಯಾಗಿರುವುದಿಲ್ಲ. ಒಬ್ಬರಿಗಿಂತ ಹೆಚ್ಚಿನ ಜೀವಂತ ಪತ್ನಿ/ ಪತಿ ಇರುವುದಿಲ್ಲ. ನನ್ನ ಜೀವಂತ ಪತ್ನಿ/ಪತಿಯ ಹೆಸರು ________________________

ಇ) ನನ್ನ ಜನ್ಮ ದಿನಾಂಕವನ್ನು ಮತ್ತು ಹೆಸರನ್ನು ಶಾಲಾ ವರ್ಗಾವಣೆ ಪತ್ರ/ ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯ ಪ್ರಕಾರ ನಿರ್ಧರಿಸಬಹುದಾಗಿದೆ.

ಸ್ಥಳ :
ದಿನಾಂಕ: (ನೌಕರರ ಹೆಸರು ಮತ್ತು ಪದನಾಮ)

(ಸಂಬಂಧ ಪಟ್ಟ ಕಛೇರಿ ಮುಖ್ಯಸ್ಥರು ನೌಕರರ ನಿಷ್ಠಯ ಪ್ರಮಾಣ ಪತ್ರವನ್ನು ಸೇವಾ ಪುಸ್ತಕದಲ್ಲಿ ದೃಢೀಕರಿಸುವುದು)

9) ಎಲ್ಲಾ ಪರೀಕ್ಷಾರ್ಥ ದ್ವಿತೀಯ ದರ್ಜೆ ಸಹಾಯಕರುಗಳ ಜನ್ಮ ದಿನಾಂಕವನ್ನು ಅವರ ಮೂಲ ಎಸ್.ಎಸ್.ಎಲ್.ಸಿ. ಅಂಕ ಪಟ್ಟಿ / ಇತರೆ ದಾಖಲೆಗಳ ಆಧಾರದ ಮೇಲೆ ಪರಿಶೀಲಿಸಿ, ಕರ್ನಾಟಕ ರಾಜ್ಯ ನೌಕರರ (ವಯೋಮಾನ ನಿರ್ಧರಿಸುವಿಕೆ) ಅಧಿನಿಯಮ 1974ರ ಕಲಂ 3ರಡಿಯಲ್ಲಿ ಕೈಗೊಳ್ಳಬೇಕಾದ ಕ್ರಮವನ್ನು ಕಛೇರಿಗಳ ಮುಖ್ಯಸ್ಥರು ಜರುಗಿಸುವುದು.

10) ಮೀಸಲಾತಿ ನಿಯಮಾವಳಿಗಳನ್ವಯ ಮೀಸಲಾತಿ ಕೋರಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ಕಳುಹಿಸಿರುವ ಪರಿಶೀಲನಾ ವರದಿಯಲ್ಲಿ ಯಾವುದಾದರೂ ಲೋಪ ಕಂಡುಬಂದಲ್ಲಿ ಅವರ ಮೀಸಲಾತಿ ಕೋಟಾದಡಿ ಆಯ್ಕೆಯಾಗಿ ಪಡೆದಿದ್ದ ಆದೇಶವು ರದ್ದಾಗುತ್ತದೆ.

11) ನೇಮಕಾತಿಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ಬಚ್ಚಿಟ್ಟಲ್ಲಿ / ಅಸಮರ್ಪಕ / ಸುಳ್ಳು ಮಾಹಿತಿಯನ್ನು ನೀಡಿ ನೇಮಕಗೊಂಡಿರುವುದು ನೇಮಕಾತಿ ಪ್ರಾಧಿಕಾರದ ಗಮನಕ್ಕೆ ಬಂದರೆ / ಬಂದಾಗ ಅಂತಹ ನೇಮಕಾತಿ ರದ್ದಾಗುತ್ತದೆ.

12) ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಿದ ಬಗ್ಗೆ ಧೃಢೀಕರಣ ಪತ್ರವನ್ನು ಹಾಜರುಪಡಿಸತಕ್ಕದ್ದು.

13) ಸರ್ಕಾರಿ ಸೇವೆಯಲ್ಲಿದ್ದು ಇಲಾಖಾ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ನಿಯಮಾವಳಿಗಳನ್ನು ಉಲ್ಲಂಘಿಸಿ ಅರ್ಜಿ ಸಲ್ಲಿಸಿರುವುದಿಲ್ಲವೆಂಬ ಬಗ್ಗೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

14) ಅಭ್ಯರ್ಥಿಗಳ ಜ್ಯೇಷ್ಠತೆಯನ್ನು ಕರ್ನಾಟಕ ಲೋಕಸೇವಾ ಆಯೋಗವು ನೀಡಿರುವ ಆಯ್ಕೆ ಪಟ್ಟಿಯ ಕ್ರಮಾಂಕದ ಆಧಾರದ ಮೇಲೆ ಪರಿಗಣಿಸಲಾಗುವುದು.

15) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

(ಶ್ರೀಕರ್ ಎಂ.ಎಸ್.)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ಶ್ರೀಕರ್. ಎಂ.ಎಸ್., ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಪ್ರತಿ:

1) ಸಂಬಂಧಿಸಿದ ಪರೀಕ್ಷಾರ್ಥ ದ್ವಿತೀಯ ದರ್ಜೆ ಸಹಾಯಕರುಗಳಿಗೆ ನೋಂದಾಯಿತ ಅಂಚೆ ಮೂಲಕ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
3) ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
4) ಎಲ್ಲಾ ಅಪರ ಆಯುಕ್ತರುಗಳಿಗೆ ಮಾಹಿತಿಗಾಗಿ.
5) ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು(ಜಾರಿ), ದ.ವ., ಕೋರಮಂಗಲ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
6) ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳು(ಆಡಳಿತ/ಮನವಿಗಳು/ಜಾರಿ/ಜಾಗೃತಿ/ಕಿರಿಯ ಕಾಯ್ದೆಗಳು), ಇವರಿಗೆ ಮಾಹಿತಿಗಾಗಿ.
7) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮಾನವ ಸಂಪನ್ಮೂಲ ಅಭಿವೃದ್ಧಿ), ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
8) ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು(ಸಿಬ್ಬಂದಿ)-2 ಮತ್ತು 3 ಹಾಗೂ (ಶಿಸ್ತುಕ್ರಮ) ಶಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ.
9) ಸಂಬಂಧಿಸಿದ ಕಛೇರಿಗಳಿಗೆ.
10) ಹೆಚ್ಚುವರಿ ಪ್ರತಿಗಳು.